ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 31 –01–2014ರ ನಡವಳಿಗಳು

ವಿಷಯದ ಸಂಖ್ಯೆ: ವಾಕಾಸ್ಥಾಸ/195/2013–14

ಪ್ರಸ್ತಾವನೆ:

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯಲ್ಲಿ ಅಧ್ಯಕ್ಷರನ್ನೊಳಗೊಂಡಂತೆ ಹನ್ನೊಂದು ಮಂದಿ ಸದಸ್ಯರುಗಳಿದ್ದು, ಈ ಪೈಕಿ 10 ಜನ ಸದಸ್ಯರಲ್ಲಿ 7 ಮಂದಿ ಮಹಿಳಾ ಸದಸ್ಯರಿರುತ್ತಾರೆ. ಈ ಸಮಿತಿಯ 10 ಸದಸ್ಯರುಗಳು ಮನವಿ ಸಲ್ಲಿಸಿ ತಮ್ಮ ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ಹಲವಾರು ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿ ತಿಳಿಸುತ್ತಾ, ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನದ ಕೊರತೆ ಇರುವುದಾಗಿ ಹಾಗೂ ಹಲವಾರು ಅಭಿವೃದ್ದಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ ವಾರ್ಡ್ ನಿವಾಸಿಗಳು ಕೋರುತ್ತಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನ ಒದಗಿಸಿಕೊಡಬೇಕೆಂದು ಪತ್ರದ ಮೂಲಕ ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸಮಿತಿಯು ಪರಿಶೀಲಿಸಿದಾಗ, ದಿನಾಂಕ 30/10/2013ರಂದು ನಡೆದ ಸಮತಿಯ ಸಭೆಯಲ್ಲಿ 2013–14ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ–ಕೋಡ್ 1771ರಲ್ಲಿ ಮೀಸಲಿಟ್ಟಿರುವ ರೂ.494.00 ಕೋಟಿಗಳ ಅನುದಾನದ ಪೈಕಿ ಪಾಲಿಕೆಯ 198 ವಾರ್ಡ್‌ಗಳಲ್ಲಿ ಹಳೆಯ ವಾರ್ಡ್‌ಗಳ ಅಭಿವೃದ್ಧಿಗೆ ತಲಾ 2ಕೋಟಿ ಮತ್ತು ಹೊಸ ವಾರ್ಡ್‌ಗಳ ಅಭಿವೃದ್ಧಿಗೆ ತಲಾ 3 ಕೋಟಿಗಳಂತೆ ಒಟ್ಟು ರೂ.465.00 ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಿ ಉಳಿಕೆಯಾಗಿರುವ ರೂ.29 ಕೋಟಿಗಳ ಮೊತ್ತಕ್ಕೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷರು ಸೂಚಿಸುವ ತುರ್ತು ಹಾಗೂ ಜರೂರು ಕಾಮಗಾರಿಗಳಿಗೆ ಜಾಬ್ ಸಂಖ್ಯೆ ನೀಡಲು ಹಾಗೂ ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್ ಮುಖಾಂತರ ಕೈಗೆತ್ತಿಕೊಳ್ಳಲು ಪ್ರಸ್ತಾವನೆಯನ್ನು ಅನುಮೋದನೆಗಾಗಿ ವಾರ್ಡ್ ಮಟ್ಟದ ಸಾರ್ವಜನಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸುವಂತೆ ಸಂಖ್ಯೆ:ವಾ.ಕಾ.ಸ್ಥಾ.ಸ/ವಿ/65/2012–13,ದಿನಾಂಕ:30–10–2013ರಂದು ನಿರ್ಣಯ ಕೈಗೊಳ್ಳಲಾಗಿದೆ. ಸದರಿ ನಿರ್ಣಯದಂತೆ, ವಾರ್ಡ್ ಮೆಟ್ಟದ ಸ್ಥಾಯಿ ಸಮಿತಿಯ ಸದಸ್ಯರು ಕೋರಿರುವ ಕಾಮಗಾರಿಗಳನ್ನು ಪಿ–1771ರಲ್ಲಿ ಉಳಿಕೆಯಾಗಿರುವ ಮೊತ್ತ ರೂ:29.00ಕೋಟಿಗಳ ಅನುದಾನದಲ್ಲಿ ಕೈಗೊಳ್ಳಲು ಈ ಕೆಳಕಂಡಂತೆ ತೀರ್ಮಾನಿಸಲಾಯಿತು.

ನಿರ್ಣಯ:

2013–14ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ–ಕೋಡ್ 1771ರಲ್ಲಿ ಮೀಸಲಿಟ್ಟಿರುವ ರೂ.494.00 ಕೋಟಿಗಳ ಅನುದಾನದ ಪೈಕಿ ಈಗಾಗಲೇ ಜಾಬ್ ಸಂಖ್ಯೆ ನೀಡಲಾಗಿರುವ 465.00ಕೋಟಿಗಳ ಅನುದಾನ ಹೊರತುಪಡಿಸಿ ಉಳಿಕೆಯಾಗಿರುವ ರೂ:29.00ಕೋಟಿಗಳ ಅನುದಾನದಲ್ಲಿ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಸದಸ್ಯರುಗಳು ಪತ್ರ ಮುಖೇನ ಕೋರಿರುವ ಈ ಕೆಳಕಂಡ ವಾರ್ಡ್‌ಗಳ ಸಿವಿಲ್ ಕಾಮಗಾರಿಗಳಿಗೆ ತಲಾ 1.00ಕೋಟಿಯಂತೆ ಮತ್ತು ವಿದ್ಯುತ್ ಕಾಮಗಾರಿಗಳಿಗೆ ತಲಾ 10.00ಲಕ್ಷದಂತೆ ಒಟ್ಟು 11.00 ಕೋಟಿಗಳ ಅನುದಾನಕ್ಕೆ ಪಿ ಕೋಡ್–1771ರಲ್ಲಿ ಜಾಬ್ ಸಂಖ್ಯೆ ನೀಡಲು ಹಾಗೂ ಜಾಬ್ ಸಂಖ್ಯೆ ನೀಡಲಾದ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್ ಮುಖಾಂತರ ಕೈಗೆತ್ತಿಕೊಳ್ಳಲು ಪ್ರಸ್ತಾವನೆಯನ್ನು ಅನುಮೋದನೆಗಾಗಿ ವಾರ್ಡ್ ಮಟ್ಟದ ಸಾರ್ವಜನಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸುವಂತೆ ತೀರ್ಮಾನಿಸಲಾಯಿತು.

1)ಸಿವಿಲ್ ಕಾಮಗಾರಿಗಳ ವಿವರಗಳು:

ಕ್ರ.ಸ	ವಾರ್ಡ್ ಸಂಖ್ಯೆ	ಒಟ್ಟು ಸಿವಿಲ್ ಕಾಮಗಾರಿಗಳು	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1	ವಾರ್ಡ್–194 ಅಭಿವೃದ್ದಿ ಕಾಮಗಾರಿಗಳು	4	100.00
2	ವಾರ್ಡ್–186ರಲ್ಲಿ ಅಭಿವೃದ್ದಿ ಕಾಮಗಾರಿಗಳು	4	100.00
3	ವಾರ್ಡ್–166ರಲ್ಲಿ ಅಭಿವೃದ್ದಿ ಕಾಮಗಾರಿಗಳು	5	100.00
4	ವಾರ್ಡ್–9ರಲ್ಲಿ ಅಭಿವೃದ್ದಿ ಕಾಮಗಾರಿಗಳು	7	100.00
5	ವಾರ್ಡ್–42ರಲ್ಲಿ ಅಭಿವೃದ್ದಿ ಕಾಮಗಾರಿಗಳು	5	100.00
6	ವಾರ್ಡ್–101ರಲ್ಲಿ ಅಭಿವೃದ್ದಿ ಕಾಮಗಾರಿಗಳು	7	100.00
7	ವಾರ್ಡ್–173ರಲ್ಲಿ ಅಭಿವೃದ್ದಿ ಕಾಮಗಾರಿಗಳು	5	100.00
8	ವಾರ್ಡ್–38ರಲ್ಲಿ ಅಭಿವೃದ್ದಿ ಕಾಮಗಾರಿಗಳು	5	100.00
9	ವಾರ್ಡ್–30ರಲ್ಲಿ ಅಭಿವೃದ್ದಿ ಕಾಮಗಾರಿಗಳು	5	100.00
10	ವಾರ್ಡ್–139ರಲ್ಲಿ ಅಭಿವೃದ್ದಿ ಕಾಮಗಾರಿಗಳು	12	100.00
	ಒಟ್ಟು	59	1000.00

2)ವಿದ್ಯುತ್ ಕಾಮಗಾರಿಗಳ ವಿವರಗಳು:

ಕ್ರ.ಸ	ವಾರ್ಡ್ ಸಂಖ್ಯೆ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1	ವಾರ್ಡ್–194ರ ವ್ಯಾಪ್ತಿಯಲ್ಲಿ ವಿದ್ಯುತ್ ಕಾಮಗಾರಿಗಳು	10.00
2	ವಾರ್ಡ್–186ರಲ್ಲಿ ವ್ಯಾಪ್ತಿಯಲ್ಲಿ ವಿದ್ಯುತ್ ಕಾಮಗಾರಿಗಳು	10.00
3	ವಾರ್ಡ್–166ರಲ್ಲಿ ವ್ಯಾಪ್ತಿಯಲ್ಲಿ ವಿದ್ಯುತ್ ಕಾಮಗಾರಿಗಳು	10.00
4	ವಾರ್ಡ್–9ರಲ್ಲಿ ವ್ಯಾಪ್ತಿಯಲ್ಲಿ ವಿದ್ಯುತ್ ಕಾಮಗಾರಿಗಳು	10.00
5	ವಾರ್ಡ್–42ರಲ್ಲಿ ವ್ಯಾಪ್ತಿಯಲ್ಲಿ ವಿದ್ಯುತ್ ಕಾಮಗಾರಿಗಳು	10.00
6	ವಾರ್ಡ್–101ರಲ್ಲಿ ವ್ಯಾಪ್ತಿಯಲ್ಲಿ ವಿದ್ಯುತ್ ಕಾಮಗಾರಿಗಳು	10.00
7	ವಾರ್ಡ್–173ರಲ್ಲಿ ವ್ಯಾಪ್ತಿಯಲ್ಲಿ ವಿದ್ಯುತ್ ಕಾಮಗಾರಿಗಳು	10.00
8	ವಾರ್ಡ್–38ರಲ್ಲಿ ವ್ಯಾಪ್ತಿಯಲ್ಲಿ ವಿದ್ಯುತ್ ಕಾಮಗಾರಿಗಳು	10.00
9	ವಾರ್ಡ್–30ರಲ್ಲಿ ವ್ಯಾಪ್ತಿಯಲ್ಲಿ ವಿದ್ಯುತ್ ಕಾಮಗಾರಿಗಳು	10.00
10	ವಾರ್ಡ್–139ರಲ್ಲಿ ವ್ಯಾಪ್ತಿಯಲ್ಲಿ ವಿದ್ಯುತ್ ಕಾಮಗಾರಿಗಳು	10.00
	ಒಟ್ಟು	100.00

ಮೇಲ್ಕಂಡಂತೆ ಒಟ್ಟು 10 ವಾರ್ಡ್‌ಗಳ ಸಿವಿಲ್ ಕಾಮಗಾರಿಗಳಿಗೆ ರೂ:10.00ಕೋಟಿ ಹಾಗೂ ವಿದ್ಯುತ್ ಕಾಮಗಾರಿಗೆ ರೂ: 1.00ಕೋಟಿ ಮೊತ್ತಕ್ಕೆ ತುರ್ತಾಗಿ ಜಾಬ್ ಸಂಖ್ಯೆ ನೀಡಿ ಸದರಿ ಕಾಮಗಾರಿಗಳನ್ನು ಸರ್ಕಾರಿ ಸ್ವಾಮ್ಯದ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ವತಿಯಿಂದ ಕೈಗೊಳ್ಳುವಂತೆ ಸಮಿತಿಯು ತೀರ್ಮಾನಿಸಿತು.

ಎ.ಹೆಚ್.ಬಸವರಾಜು

ಅಧ್ಯಕ್ಷರು

ವಾರ್ಡ್‌ನುಟ್ಟಿದೆ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕ್ರಮ ಸಂಖ್ಯೆ	ಶ್ರೀಯುತರ ಹೆಸರು	ಪದನಾಮ	ನಿರ್ಣಯದ ಪರವಾಗಿ ಸಹಿ
1	ಎ.ಹೆಚ್.ಬಸವರಾಜು	ಅಧ್ಯಕ್ಷರು	ಎ.ಹೆಚ್.ಬಸವರಾಜು

2	ತಿಮ್ಮರಾಜು	ಸದಸ್ಯರು	
3	ಅಶ್ವಥ ನಾರಾಯಣ ಜಿ.ಎ	ಸದಸ್ಯರು	
4	ರಂಗಣ್ಣ. ಕೆ	ಸದಸ್ಯರು	
5	ಸರಸ್ವತಮ್ಮ	ಸದಸ್ಯರು	
6	ಕೆ. ನಂದಿನಿ ಶ್ರೀನಿವಾಸ್	ಸದಸ್ಯರು	
7	ಸುಗುಣ ಬಾಲಕೃಷ್ಣ	ಸದಸ್ಯರು	
8	ಎಸ್.ಕೆ.ಪುಷ್ಪ	ಸದಸ್ಯರು	
9	ಶಾಹಿನ್ ತಾಜ್	ಸದಸ್ಯರು	
10	ಜ್ಯೋತಿಶ್ರೀ ಹರಿರೆಡ್ಡಿ	ಸದಸ್ಯರು	
11	ಆಶಾ ಸುರೇಶ್	ಸದಸ್ಯರು	